೫. ಅಧ್ಯಕ್ಷರ ಅಪ್ಪಣೆ ಮೇರೆಗೆ

ನಿಯಮ ೬೯ರ ಮೇರೆಗೆ

ವಿಷಯ: ತೆಂಗಿನ ಮರದಿಂದ ನೀರಾ ಇಳಿಸುವ ಬಗ್ಗೆ ಚರ್ಚೆಗೆ ಒತ್ತಾಯ.

+ ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ನನ್ನದೊಂದು ಮನವಿ ಇದೆ. ಈಗ ಕರ್ನಾಟಕ ವಿಶ್ವವಿದ್ಯಾಲಯಗಳ ವಿಧೇಯಕವನ್ನು ತೆಗೆದುಕೊಂಡರೆ ಅದರ ಮೇಲೆ ಚರ್ಚೆ ಬಹುಶಃ ಇವೊತ್ತು ಮುಗಿಯುವುದಿಲ್ಲ ಮತ್ತು ನಾಳೆಯೂ ಕೂಡ ಚರ್ಚೆ ಮುಗಿಯುವುದಿಲ್ಲವೆನ್ನುವ ಸಂಶಯ ನನಗಿದೆ. ಆದರೆ ನಿಯಮ ೬೯ರಡಿಯಲ್ಲಿ ರಾಜ್ಯದಲ್ಲಿರುವ ತೆಂಗಿನ ಮರಗಳಿಂದ ನೀರಾ ಇಳಿಸುವ ಬಗ್ಗೆ ಈಗಾಗಲೇ ಕೇವಲ ಚರ್ಚೆ ಮಾತ್ರ ಪ್ರಾರಂಭವಾಗಿದೆ. ಈ ವಿಚಾರದ ಬಗ್ಗೆ ಎಲ್ಲೆಲ್ಲಿ ತೆಂಗಿನ ಮರಗಳಿಗೆ ನುಸಿ ರೋಗ ಬಂದಿದೆ ಆ ಭಾಗದಿಂದ ಬಂದಂಥ ಹಲವಾರು ಶಾಸಕರುಗಳು ಸದನದಲ್ಲಿ ಮಾತನಾಡಿ, ಹಲವಾರು ವಿಷಯಗಳ ಮೂಲಕ ಬೆಳಕು ಚೆಲ್ಲಲು ಕಾತುರರಾಗಿದ್ದಾರೆ. ಇಲ್ಲಿ ಮುಖ್ಯವಾಗಿ ನಾನು ಹೇಳಬಯಸುವುದೇನೆಂದರೆ, ನಿಯಮ ೬೯ರಡಿಯಲ್ಲಿ ನೀರಾ ಇಳಿಸುವ ಬಗ್ಗೆ ಸದನದಲ್ಲಿ ಚರ್ಚೆಗೆ ಮಂಡನೆಯಾಗಿರುವಾಗ ನಿನ್ನೆ ದಿವಸ ಕ್ಯಾಬಿನೆಟ್‌ನಲ್ಲಿ ಸಧ್ಯಕ್ಕೆ ನೀರಾ ಇಳಿಸಲು ಅನುಮತಿ ನೀಡದೇ ಇರಲು ರಾಜ್ಯ ಸರ್ಕಾರ ನಿರ್ಧಾರ ತೆಗೆದುಕೊಂಡಿದ್ದು, ತೆಂಗಿನ ಮರಕ್ಕೆ ಬಂದಿರುವ ನುಸಿ ರೋಗವನ್ನು ನಿಯಂತ್ರಣ ಮಾಡುವ ಸಲುವಾಗಿ ಸಮರೋಪಾದಿಯಲ್ಲಿ ಕಾರ್ಯಕ್ರಮ ಹಾಕಿಕೊಳ್ಳಲು ಮುಂದಾಗಿದೆ ಎಂದು ಹೇಳುವ ಮೂಲಕ ಈ ವಿಷಯದಲ್ಲಿ ಚರ್ಚೆಯನ್ನು ಅಂತಿಮಗೊಳಿಸಿದ್ದಾರೆ. ಸದನದಲ್ಲಿ ನಿಯಮ ೬೯ರಡಿಯಲ್ಲಿ ನೀರಾ ಇಳಿಸುವ ಬಗ್ಗೆ ಚರ್ಚೆ ಪ್ರಾರಂಭವಾಗಿ ಇದರಿಂದ ಅನುಕೂಲತೆಗಳೇನು ಮತ್ತು ಅನಾನುಕೂಲತೆಗಳೇನು ಮತ್ತು ನೀರಾ ಇಳಿಸುವುದರಿಂದ ನುಸಿರೋಗ ಹೋಗುತ್ತದೆಯೋ ಅಥವಾ ಇಲ್ಲವೋ ಎಂಬ ಬಗ್ಗೆ ವೈಜ್ಞಾನಿಕವಾದ ವರದಿಗಳೂ ಕೂಡ ಇವೆ. ಇದರ ಬಗ್ಗೆ ಸಾಕಷ್ಟು ಚರ್ಚೆ ಸದನದಲ್ಲಿ ಆಗಬೇಕಾಗುತ್ತದೆಯಲ್ಲದೆ ಪರಿಹಾರವನ್ನೂ ಕೂಡ ಹುಡುಕಬೇಕಾದ ಅನಿವಾರ್ಯತೆ ಇದೆ. ಇಂಥ ಸಂದರ್ಭದಲ್ಲಿ ಕ್ಯಾಬಿನೆಟ್‌ನಲ್ಲಿ ನೀರಾ ಇಳಿಸಲು ಅನುಮತಿ ಕೊಡಲಾಗುವುದಿಲ್ಲವೆನ್ನುವ ತೀರ್ಮಾನವನ್ನು ತೆಗೆದುಕೊಂಡರೆ ಹೇಗೆ? ಈ ರೀತಿ ಮಾಡಿದರೆ ನುಸಿರೋಗ ನಿಯಂತ್ರಣಕ್ಕೆ ಸರ್ಕಾರ ಏನು ಪರಿಹಾರ ಕಂಡುಹಿಡಿದ ಹಾಗೆ ಆಗುತ್ತದೆ? ಇದರ ಬಗ್ಗೆ ಸಾಕಷ್ಟು ಚರ್ಚೆ ಆಗಬೇಕಾದ ಅಗತ್ಯವಿದೆ. ಆದುದರಿಂದ ಈಗಾಗಲೇ ನಿಯಮ ೬೯ರಡಿಯಲ್ಲಿ ನೀರಾ ಇಳಿಸುವ ಬಗ್ಗೆ ಚರ್ಚೆ ಏನು ಪ್ರಾರಂಭವಾಗಿತ್ತೊ ಅದನ್ನು ಮುಂದುವರಿಸಲು ಮಾನ್ಯ ಅಧ್ಯಕ್ಷರು ಪ್ರಾಶಸ್ತ್ಯ ಕೊಟ್ಟು ಅವಕಾಶ ಮಾಡಿಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಏಕೆಂದರೆ ಈ

ವಿಚಾರದ ಬಗ್ಗೆ ಹಲವಾರು ಶಾಸಕರುಗಳು ಸಾಕಷ್ಟು ಬೆಳಕನ್ನು ಚೆಲ್ಲುವವರಾಗಿದ್ದಾರೆ. ಆದಕಾರಣ ಮೊದಲು ನೀರಾ ಇಳಿಸುವ ಬಗ್ಗೆ ಚರ್ಚೆಯನ್ನು ಮುಂದುವರೆಸಬೇಕು. ಕರ್ನಾಟಕ ವಿಶ್ವವಿದ್ಯಾಲಯಗಳ ಬಿಲ್‌ನ್ನು ಚರ್ಚೆಗೆ ತೆಗೆದುಕೊಂಡರೆ ಎರಡು ದಿವಸದಲ್ಲಿ ಚರ್ಚೆ ಮುಗಿಯುವುದಿಲ್ಲ. ಬಹುಶಃ ಮುಂದಿನ ಸೆಷನ್‌ಗೆ ಈ ಬಿಲ್ಲನ್ನು ತೆಗೆದುಕೊಳ್ಳಬಹುದು. ಆದರೆ ನೆಕ್ಸ್ಟ್ ಸೆಷನ್‌ಗೆ ನೀರಾ ವಿಷಯ ಇರುವುದಿಲ್ಲ. ಆದ್ದರಿಂದ ನೀರಾ ವಿಷಯಕ್ಕೆ ಎರಡು ಮೂರು ತಾಸು ಟೈಮ್ ಕೊಡಬೇಕಾಗುವುದು ಅತಿ ಅವಶ್ಯಕವಿದೆ.

ಶ್ರೀ ವಿಜಯಕುಮಾರ್ ಶೆಟ್ಟಿ (ಸೂರತ್ಕಲ್): ಮಾನ್ಯ ಅಧ್ಯಕ್ಷರೆ, ಕರ್ನಾಟಕ ಯೂನಿವರ್ಸಿಟಿ ಬಿಲ್‌ಗಾಗಿ ನಾವು ಮೂರ್ನಾಲ್ಕು ದಿವಸಗಳಿಂದ ಕಾಯುತ್ತಿದ್ದೇವೆ. ಈಗಾಗಲೇ ಒಂದು ವಾರವಾಗಿದೆ. ಈ ಬಿಲ್‌ನಲ್ಲಿ ರಾಜ್ಯದ ವಿದ್ಯಾರ್ಥಿಗಳ ಭವಿಷ್ಯವನ್ನು ಇನ್ನಷ್ಟು ಉಜ್ವಲಗೊಳಿಸುವ ನಿಟ್ಟಿನಲ್ಲಿ ಹಲವಾರು ಅಂಶಗಳಿವೆ. ಇಂಥ ಬಿಲ್‌ನ್ನು ರಾಜ್ಯ ಸರ್ಕಾರ ತಂದಿದೆ. ಬಹುಶಃ ಇದಕ್ಕೆ ವಿರೋಧ ಪಕ್ಷಗಳವರೂ ಕೂಡ ಸಹಾನುಭೂತಿ ವ್ಯಕ್ತಪಡಿಸುವ ಸೂಚನೆಗಳು ಕಾಣುತ್ತಿವೆ. ಇದನ್ನು ಆದ್ಯತೆ, ಪ್ರಾಶಸ್ತ್ಯದ ಮೇಲೆ ತೆಗೆದುಕೊಳ್ಳಬೇಕೆಂದು ವಿನಂತಿಸುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯ (ಕನಕಪುರ): ಮಾನ್ಯ ಅಧ್ಯಕ್ಷರೆ, ಮಾನ್ಯ ಉನ್ನತ ಶಿಕ್ಷಣ ಸಚಿವರು ಕಳೆದ ಅಧಿವೇಶನದಲ್ಲಿಯೇ ವಿಶ್ವವಿದ್ಯಾಲಯದ ವಿಧೇಯಕವನ್ನು ತಿದ್ದುಪಡಿ ಮಾಡಬೇಕೆನ್ನುವ ಉದ್ದೇಶದಿಂದ ವಿಧೇಯಕವನ್ನು ಸದನದಲ್ಲಿ ತೆಗೆದುಕೊಂಡು ಬಂದು ಕಡೆಗೆ ಜಂಟಿ ಸಲಹಾ ಸಮಿತಿ ಮುಂದೆ ವಿಧೇಯಕ ಪರಿಶೀಲನೆಗೆ ಹೋಗಿ ಈಗ ಮತ್ತೆ ಈ ವಿಧೇಯಕವನ್ನು ಸದನದ ಮುಂದೆ ತಂದಿದ್ದಾರೆ. ಈ ವಿಧೇಯಕದ ಬಗ್ಗೆ ಜಂಟಿ ಸಲಹಾ ಸಮಿತಿಯಲ್ಲಿ ಎಲ್ಲಾ ಪಕ್ಷದ ಗೌರವಾನ್ವಿತ ಸದಸ್ಯರುಗಳು ಸಾಕಷ್ಟು ಚರ್ಚೆ ಮಾಡಿದ್ದಾರೆ. ಸ್ವಾಭಾವಿಕವಾಗಿ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳ ಮಧ್ಯೆ ಅನೇಕ ವಿಚಾರಗಳಲ್ಲಿ ಭಿನ್ನಾಭಿಪ್ರಾಯಗಳು ಇರುತ್ತವೆ. ಈ ಜಂಟಿ ಸಲಹಾ ಸಮಿತಿಯಿಂದ ರಾಜೀನಾಮೆ ಕೊಟ್ಟಿರತಕ್ಕಂಥ ಅಥವಾ ಡಿಸೆಂಟ್ ನೋಟ್ ಕೊಟ್ಟಿರತಕ್ಕಂಥ ಪ್ರಸಂಗಗಳು ಬಹಳ ಕಡಿಮೆ. ಈ ತರಹದ ಇನ್‌ಸ್ಟೆನ್ಸಸ್‌ಗಳು ನಮ್ಮ ಲೆಜಿಸ್ಲೇಚರ್ ಹಿಸ್ಟರಿಯಲ್ಲಿ ಬಹಳ ಕಡಿಮೆ, ಆಗೇ ಇಲ್ಲ ಎಂದು ಹೇಳಲಿಕ್ಕೆ ಆಗುವುದಿಲ್ಲ, ಅಪರೂಪ. ಬಹಳಷ್ಟು ಆಗಿವೆ, ಅದರಲ್ಲೇನೂ ತಪ್ಪು ಇಲ್ಲ. ಇನ್ನು ಮೆಜ್ಯಾರಿಟಿ ಇರತಕ್ಕಂಥ ಪಾರ್ಟಿಯವರು ಏನು ಬೇಕಾದರೂ ಕಾನೂನು ಮಾಡಿಕೊಂಡು ಎಷ್ಟು ಬೇಕಾದರೂ ಅಧಿಕಾರವನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳಿದರೂ ಕೂಡ ಅದಕ್ಕೆ ಮೈನಾರಿಟಿ ಇರತಕ್ಕಂಥವರು ಅಪೋಸಿಷನ್‌ನಲ್ಲಿರತಕ್ಕಂಥವರು ಅಲ್ಟಿಮೇಟ್ಲಿ ಏನೂ ಮಾಡುವುದಕ್ಕಾಗುವುದಿಲ್ಲ. we will have our way ಎಂದು ಅವರು

ಹೇಳುತ್ತಾರೆ. we will have our say ಎಂದು ನಾವು ಹೇಳುತ್ತೇವೆ. ಅಷ್ಟೇ ಇದರಲ್ಲಿ ಆಗತಕ್ಕದ್ದು. ಆದುದರಿಂದ ಈಗೇನು ಮಾನ್ಯ ಶಿಕ್ಷಣ ಸಚಿವರು ವಿಧೇಯಕವನ್ನು ಮಂಡನೆ ಮಾಡಿದ್ದಾರೆ ಇದರ ಕೆಲವು ಅಂಶಗಳ ಬಗ್ಗೆ ನಮಗೆ ಅನುಮಾನವಿದೆ, ಸಂಶಯವಿದೆ. ಆದುದರಿಂದ ಈ ವಿಧೇಯಕವನ್ನು ಸದನದಲ್ಲಿ ಇಡಬೇಕೋ ಬೇಡವೋ ಎಂಬ ಬಗ್ಗೆ ಚರ್ಚೆ ಮಾಡುವುದರ ಬದಲಾಗಿ ಈಗ ಶಿಕ್ಷಣ ಸಚಿವರು, ವಿರೋಧ ಪಕ್ಷದ ನಾಯಕರು ಹಾಗೂ ನಮ್ಮ ಪಕ್ಷದಿಂದ ಹಿಂದೆ ಶಿಕ್ಷಣ ಸಚಿವರಾಗಿದ್ದ ಸೋಮಶೇಖರ್‌ರವರು ಮತ್ತು ಇನ್ನು ನಾಲ್ಕಾರು ಸದಸ್ಯರುಗಳು ಕುಳಿತು ಚರ್ಚಿಸಬಹುದು. ಸರ್ಕಾರದವರು ಒಂದು ಹೆಜ್ಜೆ ಹಿಂದೆ ಸರಿಯಲಿಕ್ಕೆ ತಯಾರಿದ್ದಾರೆ ಎನ್ನತಕ್ಕಂಥ ಇಂಗಿತವನ್ನು ನಾನು ತಿಳಿದುಕೊಂಡಿದ್ದೇನೆ. ಆ ಇಂಗಿತವನ್ನು ಕೊಟ್ಟಿರುವುದರಿಂದ ಇವರೆಲ್ಲರೂ ಚರ್ಚೆ ಮಾಡುತ್ತಿರಲಿ. ಸದನ ನಾಳೆ ಸಾಯಂಕಾಲದೊಳಗೆ ಮುಗಿಯಬೇಕಾಗಿದೆ. ಇನ್ನೂ ಅನೇಕ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಬೇಕಾದ ವಿಚಾರಗಳಿವೆ, ಪ್ರಶ್ನೋತ್ತರವಿದೆ. ಇವಕ್ಕೆಲ್ಲಾ ಸರ್ಕಾರ ಉತ್ತರ ಕೊಡಬೇಕಾಗುತ್ತದೆ. ಆದುದರಿಂದ ನಾನು ತಮಗೆ ಕೇಳಿಕೊಳ್ಳುವುದೇನೆಂದರೆ, ಅವರು ಚರ್ಚೆ ಮಾಡುತ್ತಾ ಇರಲಿ, ಏನಾದರೂ ಅವಕಾಶವಿದ್ದರೆ ಮತ್ತು ಅವರು ಒಮ್ಮತಕ್ಕೆ ಬರುವುದೇನಾದರೂ ಇದ್ದರೆ ನಾವು ಸ್ವಲ್ಪ ಸಮಯ ಶಿಕ್ಷಣ ಇಲಾಖೆ ಬಗ್ಗೆ ಚರ್ಚೆ ಮಾಡಿಯಾದ ನಂತರ ಈ ಮಸೂದೆಯನ್ನು ಪಾಸ್ ಮಾಡಿಕೊಡಬಹುದು. ಆದರೆ ಸಧ್ಯಕ್ಕೆ ತಾವು ಸಮಯವನ್ನು ಬೇರೆಯದಕ್ಕೆ ವ್ಯರ್ಥ ಮಾಡದೆ ನೀರಾ ಇಳಿಸುವ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟರೆ ಅನುಕೂಲವಾಗುತ್ತದೆ ಎಂಬುದು ನನ್ನ ಸಲಹೆಯಾಗಿದೆ.

ಡಾ: ಜಿ.ಪರಮೇಶ್ವರ (ಉನ್ನತ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, ಈ ಅಧಿವೇಶನ ಪ್ರಾರಂಭವಾದಾಗಿನಿಂದ ಜಂಟಿ ಸಲಹಾ ಸಮಿತಿಯಿಂದ ಬಂದ ವಿಶ್ವವಿದ್ಯಾನಿಲಯಗಳ ವಿಧೇಯಕವನ್ನು ಸದನದಲ್ಲಿ ಮಂಡನೆ ಮಾಡುವುದಕ್ಕೆ ನಾನು ಒಂದು ವಾರಗಳವರೆಗೆ ಪ್ರತಿ ದಿನ ಕಾಯುತ್ತಿದ್ದೆ. ಇದನ್ನು ಮಂಡಿಸಿದ ಮೇಲೂ ಕೂಡ ನಾನು ಇದರ ಬಗ್ಗೆ ಚರ್ಚೆಯಾಗಲಿ ಎಂದು ಕಳೆದ ನಾಲ್ಕು ದಿವಸಗಳಿಂದ ಕಾಯುತ್ತಿದ್ದೇನೆ. ಪ್ರತಿ ದಿನ ಅಜೆಂಡಾದಲ್ಲೂ ಬರುತ್ತಿದ್ದರೂ ಕೂಡ ಒಂದಲ್ಲ ಒಂದು ಪ್ರಾಮುಖ್ಯವಾದ ವಿಚಾರಗಳ ಮೇಲೆ ಚರ್ಚೆಗಳು ಆಗುತ್ತಾ ಇವೆ. ಪ್ರಾಮುಖ್ಯವಾದ ವಿಧೇಯಕಗಳನ್ನು ತೆಗೆದುಕೊಳ್ಳುತ್ತಾ ಇದ್ದೀರಿ. ಇವೊತ್ತು ಈ ಮಸೂದೆಯನ್ನು ಚರ್ಚೆಗೆ ತೆಗೆದುಕೊಳ್ಳಲಾಗುವುದು ಎಂದು ಹೇಳಿ ಸಲಹೆಯನ್ನು ಕೊಡಲಾಗಿತ್ತು. ಶಿಕ್ಷಣಕ್ಕೆ ಇಂದು ಇಷ್ಟೊಂದು ಗೊಂದಲವಿರಬಹುದು, ಯಾರೋ ಕೆಲವರ ಅಭಿಪ್ರಾಯಕ್ಕೆ ಈ ವಿಧೇಯಕ ಸರಿಹೋಗದೇ ಇರಬಹುದು, ಯಾರೋ ವಿದ್ಯಾರ್ಥಿಗಳ ಮೂಲಕ ಇಡೀ ರಾಜ್ಯದಲ್ಲಿ ಇದರ ಬಗ್ಗೆ ಗೊಂದಲವನ್ನು ಸೃಷ್ಟಿ ಮಾಡಿದರೆ ಆ ಕಾರಣಕ್ಕೋಸ್ಕರ ಇದನ್ನು

ಮುಂದ ಹಾಕಿಕೊಂಡು ಹೋಗುವುದು ಅಷ್ಟೊಂದು ಸಾಧುವಲ್ಲ. ನಾನು ಈ ವಿಧೇಯಕವನ್ನು ಮಂಡನೆ ಮಾಡಿದ ಕಾಲಕ್ಕೇ ಇದರ ಬಗ್ಗೆ ಬೇಕಾದಷ್ಟು ಚರ್ಚೆ ಮಾಡಿ ಉತ್ತಮವಾದ ಸಲಹೆ ಕೊಡಿ, ಸರ್ಕಾರ ಬಹಳ ಓಪನ್ ಮೈಂಡ್‌ನಿಂದ ಇದೆ ಎನ್ನುವ ಮಾತನ್ನು ಕೂಡ ನಾನು ಹೇಳಿದೆ. ಆದುದರಿಂದ ಈ ವಿಧೇಯಕದ ಬಗ್ಗೆ ಚರ್ಚೆಗೆ ತಾವು ಅವಕಾಶ ಕೊಡಿ, ಚರ್ಚೆ ನಡೆಯುತ್ತಾ ಇರಲಿ. ಮಾನ್ಯ ಸಿಂಧ್ಯರವರು ಬಹಳ ಹಿರಿಯ ಸದಸ್ಯರಿದ್ದಾರೆ. ಅವರು ಹೆಚ್ಚಿನ ಅನುಭವ ಇರುವವರು. ಅವರು ಹೇಳಿದ ಸಲಹೆ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುವ ಸಲಹೆ ಬಗ್ಗೆ ನಾಲ್ಕು ಜನ ಕೂತು ಮಾತನಾಡುವುದಕ್ಕೆ ನನ್ನದು ಏನೂ ಅಡ್ಡಿ ಇಲ್ಲ. ಆದರೆ ಚರ್ಚೆ ಪ್ರಾರಂಭ ಮಾಡಿ, ಅನೇಕ ಜನ ಮಾನ್ಯ ಸದಸ್ಯರುಗಳು ಇದರ ಬಗ್ಗೆ ಮಾತನಾಡುವವರಿದ್ದಾರೆ, ಬೆಳಕು ಚೆಲ್ಲುವವರಿದ್ದಾರೆ, ಸಲಹೆ ಕೊಡುವವರಿದ್ದಾರೆ, ಆದುದರಿಂದ ಚರ್ಚೆಗೆ ಅವಕಾಶ ಮಾಡಿ ಕೊಡಬೇಕೆಂದು ಮಾನ್ಯ ಅಧ್ಯಕ್ಷರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಡಿ.ವಿ.ಸದಾನಂದಗೌಡ (ಪುತ್ತೂರು): ಯಾರ ಮಕ್ಕಳಿಗೆ ಈ ಶಾಲೆಗಳು ಕಾಲೇಜುಗಳು ವಿಶ್ವವಿದ್ಯಾನಿಲಯಗಳು, ಇರಬೇಕೆಂದು ಹೇಳುವ ವ್ಯವಸ್ಥೆ ವಿಷಯದ ಬಗ್ಗೆ ನಾವು ಆಲೋಚನೆ ಮಾಡಿದ್ದೇವಾ? ಆ ಮಕ್ಕಳನ್ನೇ ಕಳುಹಿಸಲಿಕ್ಕೆ ಸಾಧ್ಯವಾಗದ ಪರಿಸ್ಥಿತಿ ಸಮಾಜದಲ್ಲಿ ನಿರ್ಮಾಣವಾದರೆ ಬಹುಶಃ ಯಾವುದಕ್ಕೆ ಆದ್ಯತೆ ಕೊಡಬೇಕೆಂದು ತಾವು ನಿಶ್ಚಯ ಮಾಡಬೇಕಾಗುತ್ತದೆ. ಈ ಸದನದ ಪ್ರಾರಂಭಿಕ ದಿನದಿಂದ ಸಹ ನೀರಾದ ಬಗ್ಗೆ ಚರ್ಚೆಯಾಗಬೇಕೆಂದು ತಮ್ಮ ಮುಂದೆ ನಮ್ಮ ಬೇಡಿಕೆ ಇದೆ. ನಾವು ಅಡ್ಜರ್ನ್‌ಮೆಂಟ್ ಮೋಷನ್ ಕೊಟ್ಟಿದ್ದೇವೆ. ತಾವು ಅದನ್ನು ಕನ್‌ಸಿಡರ್ ಮಾಡುತ್ತೇನೆಂದು ಹೇಳಿದ್ದೀರಿ, ನಿಯಮ ೬೯ರಲ್ಲಿ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೀರಿ, ಅದನ್ನು ಅಜೆಂಡಾದಲ್ಲಿ ಕೂಡ ಹಾಕಿದ್ದೀರಿ, ಇದಕ್ಕೆ ನಮ್ಮ ನಿಜವಾದ ಅಭಿನಂದನೆಗಳನ್ನು ನಿಮಗೆ ಸಲ್ಲಿಸುತ್ತೇವೆ. ತಾವು ಕನಿಷ್ಟ ಅಷ್ಟಾದರೂ ಕನಿಕರ ತೋರಿಸಿದ್ದಕ್ಕಾಗಿ ನಾವು ತಮಗೆ ಕೃತಜ್ಞತೆ ಸಲ್ಲಿಸಲೇ ಬೇಕು. ಆದರೆ ಇವತ್ತು ಒಂದೆರಡು ದಿವಸದಲ್ಲಿ ಯೂನಿವರ್ಸಿಟಿ ಬಿಲ್ ಹೆಚ್ಚು ಕಡಿಮೆಯಾದರೆ ಇಡೀ ವಿದ್ಯಾ ಕ್ಷೇತ್ರದಲ್ಲಿ ಏನೂ ಅಲ್ಲೋಲ ಕಲ್ಲೋಲವಾಗುವುದಿಲ್ಲ. ಆದರೆ ರೈತನು ಬೆಳಸಿರುವಂತಹ ತೆಂಗಿನ ಮರಗಳು ಸತ್ತರೆ ಅದನ್ನು ಮತ್ತೆ ಅವರು ಬೆಳಸಬೇಕಾದರೆ ೧೦ ವರ್ಷಗಳ ಕಾಲ ಬೇಕು. ಅವನೇ ಬದುಕಲು ಸಾಧ್ಯವಾಗದ ಇರುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಆದಕಾರಣ ಆದ್ಯತೆ ಮೇಲೆ ಪರಿಗಣನೆ ಮಾಡಿದರೂ ಕೂಡ ನೀರಾದ ಬಗ್ಗೆ ರೈತರ ಸಮಸ್ಯೆ ಬಗ್ಗೆ ಪರಿಹಾರ ಕಂಡುಕೊಳ್ಳುವುದರ ಬಗ್ಗೆ ಚರ್ಚೆ ಮಾಡುವುದಕ್ಕೆ ಆದ್ಯತೆ ಕೊಡುವ ಅವಶ್ಯಕತೆ ಇದೆ ಎಂದು ನಮ್ಮ ವಾದ. ತಾವು ರೈತ ಕುಟುಂಬದಿಂದ ಬಂದವರು. ತಮಗೆ ಕೂಡ ರೈತರ ಬಗ್ಗೆ ಕಾಳಜಿ ಇದೆ. ಆದರೆ ಇದು ಅನಿವಾರ್ಯ ಪರಿಸ್ಥಿತಿ. ಬಿಲ್‌ಗಳ ಬಗ್ಗೆ ನಾವು ಎಷ್ಟು ಕೋ-ಆಪರೇಟ್ ಮಾಡಿದ್ದೇವೆ,

ಎಂಬುದು ನಿಮಗೆ ಗೊತ್ತಿದೆ. ನಿಮಗೆ ಕೂಡ ಮನಸ್ಸಿನಲ್ಲಿ ನಮ್ಮ ಬಗ್ಗೆ ಶಹಭಾಸ್‌ಗಿರಿ ಕೊಡಬೇಕೆಂದು ಇದೆ. ಆದರೆ ಏನು ಮಾಡುವುದು, ಅನಿವಾರ್ಯ ಪರಿಸ್ಥಿತಿಯಲ್ಲಿ ಹಲವಾರು ಸಂದರ್ಭಗಳಲ್ಲಿ ಎಲ್ಲಾ ಸ್ಥಳಗಳಲ್ಲೂ ಅದನ್ನು ಹೇಳುವುದಕ್ಕಾಗುವುದಿಲ್ಲ. ಈ ಪರಿಸ್ಥಿತಿಯಲ್ಲಿ ರೈತರೆ ನಿಮಗೆ ಶಹಭಾಸ್‌ಗಿರಿ ಕೊಡುವ ಒಂದು ಕೆಲಸವನ್ನು ನೀವು ಮಾಡಬಹುದು. ನಾಳೆ ಸಾಯಂಕಾಲದ ಒಳಗೆ ನಮ್ಮ ಸದನದ ಗೌರವಾನ್ವಿತ ಸಭಾಧ್ಯಕ್ಷರು ಇಡೀ ರಾಜ್ಯದ ರೈತರ ಹಿತಾಸಕ್ತಿ ಕಾಪಾಡುವ ಪ್ರಯತ್ನದಲ್ಲಿ ಯಶಸ್ವಿಯಾಗಿದ್ದಾರೆ ಮತ್ತು ಸದನದಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆಂಬ ಗೌರವಕ್ಕೆ ಪಾತ್ರರಾಗುತ್ತೀರಿ. ಆದ್ದರಿಂದ ನೀರಾಗೆ ಪ್ರಥಮ ಆದ್ಯತೆ ಕೊಡಬೇಕೆಂದು ಹೇಳುತ್ತೇನೆ.

ಡಾ: ಜಿ.ಪರಮೇಶ್ವರ: ನೀರಾದ ಬಗ್ಗೆ ವಿಶೇಷವಾಗಿ ಚರ್ಚೆ ಮಾಡಬೇಕೆನ್ನುವುದರಲ್ಲಿ ನನ್ನದು ಎರಡು ಅಭಿಪ್ರಾಯವಿಲ್ಲ. ಆದರೆ ನಾನು ಫಿಜಿಯಾಲಜಿಯಲ್ಲಿ, ಅಗ್ರಿಕಲ್ಚರ್ ಸೈನ್ಸ್‌ನಲ್ಲಿ ಪಿಹೆಚ್‌ಡಿ ಮಾಡಿದ್ದೇನೆ. ತಾವು ಏನು ನೀರಾ ಬಗ್ಗೆ ವಾದ ಮಾಡುವುದಕ್ಕೆ ಹೊರಟಿದ್ದೀರಿ, ಇದು ಬಹಳ ಅವೈಜ್ಞಾನಿಕವಾದುದು. ನಾನೇ ಓದಿದ ಕೃಷಿ ವಿಶ್ವವಿದ್ಯಾನಿಲಯದಲ್ಲಿನ ಫಿಜಿಯಾಲಜಿ ಇಲಾಖೆಯಿಂದ ವರದಿ ತರಿಸಿಕೊಂಡಿದ್ದೇನೆ. ಅದು ಚರ್ಚೆ ಮಾಡುವಾಗ ಹೇಳುವಂಥದ್ದು. ಇದರಲ್ಲಿ ಯಾವುದೇ ತಿರುಳು ಇಲ್ಲ. There is no substantial support for your arguments. ಅಂತಹ ಅವೈಜ್ಞಾನಿಕವಾದ ವಿಚಾರವನ್ನು ತೆಗೆದುಕೊಂಡು ರೈತರಿಗೆ ದಿಕ್ಕು ತಪ್ಪಿಸಿ ಎಲ್ಲರೂ ಒಂದು ರೀತಿಯ ಗೊಂದಲ ಸೃಷ್ಟಿ ಮಾಡಿ ಅವೈಜ್ಞಾನಿಕವಾದ ವಿಚಾರಗಳನ್ನು ತೆಗೆದುಕೊಂಡು ಹೋಗಿ ರೈತರಿಗೆ ಹೇಳಿ ನೀರಾ ಇಳಿಸಿ ರೈತರು ಹುಚ್ಚು ಎದ್ದು.....

(ಗೊಂದಲ)

Sri.H.C.Basavaraju:- It is not correct to say, Not a scientific approach.....

DR.G.PARAMESHWAR:- It is a non-scientific approach.

ಶ್ರೀ ಜಗದೀಶ್ ಶೆಟ್ಟರ್: ಅವೈಜ್ಞಾನಿಕವಾದ, ಪ್ರಾಕ್ಟಿಕಲ್ ಅಲ್ಲ ಎನ್ನುವುದು ನಮ್ಮ ಮುಂದಿರುವ ಬಹಳ ಮುಖ್ಯವಾದ ವಿಚಾರ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಆ ಬಗ್ಗೆ ಚರ್ಚೆ ಮಾಡುವುದಕ್ಕೆ ನಮ್ಮದು ಏನೂ ಅಭ್ಯಂತರವಿಲ್ಲ. ಮೊದಲು ಬಿಲ್ ಪಾಸ್ ಆಗಲಿ. ನಂತರ ಚರ್ಚೆಗೆ ತೆಗೆದುಕೊಳ್ಳಿ.

ಯಾವ ಕಾರಣಕ್ಕೆ ನಾವು ಬೇಡವೆಂದು ಹೇಳುತ್ತೇವೆ? ಹೌದು ಎಂದು ಹೇಳುತ್ತೇವೆ? Let us discuss pro and against ಆರ್ಗುಮೆಂಟ್ಸ್ ಎಲ್ಲಾ ಕೇಳಿಯಾದ ನಂತರ ನೀವು ಏನು ತೀರ್ಮಾನ ಕೊಡುತ್ತೀರಿ ನೋಡೋಣ. ಈಗ ಯೂನಿವರ್ಸಿಟಿ ಬಿಲ್ ತೆಗೆದುಕೊಳ್ಳೋಣ.

ಶ್ರೀ ಜಗದೀಶ್ ಶೆಟ್ಟರ್: ನೀರಾ ಬಗ್ಗೆ ಇವರು ಏನು ತೀರ್ಮಾನ ತೆಗೆದುಕೊಂಡಿದ್ದಾರೆ ಅದು ನಮಗೆ ಗೊತ್ತಿದೆ. ಇಬ್ಬರು ಶಾಸಕರು ಇದರ ಬಗ್ಗೆ ಚರ್ಚೆ ಪ್ರಾರಂಭ ಮಾಡಲಿ, ನಂತರ ಯೂನಿವರ್ಸಿಟಿ ಬಿಲ್ ತೆಗೆದುಕೊಳ್ಳೋಣ.

ಶ್ರೀ ಕಾಗೋಡು ತಿಮ್ಮಪ್ಪ: ಈ ಅಧಿವೇಶನ ವಿಶೇಷವಾಗಿ ಬೇಡಿಕೆಗಳ ಮೇಲೆ ಇರುವ ಅಧಿವೇಶನ, ಸರ್ಕಾರದ ಕಾರ್ಯಕಲಾಪಗಳಿಗೆ ಆದ್ಯತೆ ಸಿಗದಿದ್ದರೆ ಸರ್ಕಾರ ಯಾವಾಗ ತನ್ನ ಕಾರ್ಯ ನಿರ್ವಹಿಸಬೇಕು?

ಶ್ರೀ ಜಗದೀಶ್ ಶೆಟ್ಟರ್: ಏಳೆಂಟು ಬಿಲ್‌ಗಳು ಪಾಸ್ ಆಗಿವೆ. ಸರ್ಕಾರಿ ಕಾರ್ಯ ಕಲಾಪಗಳೇ ನಡೆಯುತ್ತಿರುವುದು. ಇದು ಬಹಳ ಪ್ರಮುಖವಾದ ವಿಚಾರ. ನಾವು ಯಾಪಾಗಿನಿಂದ ಹೇಳುತ್ತಿದ್ದೇವೆ.

ಶ್ರೀ ಟಿ.ಜಿ.ಆರ್.ಸಿಂಧ್ಯ: ವಿಶ್ವವಿದ್ಯಾನಿಲಯಗಳ ತಿದ್ದುಪಡಿ ಮಸೂದೆ ವಿಚಾರದಲ್ಲಿ ಸರ್ಕಾರ ಒಂದು ಹೆಜ್ಜೆ ಹಿಂದೆ ಹೋಗಿದೆ. ಇದರಿಂದ ಸಹಮತಕ್ಕೆ ಬರಲಿಕ್ಕೆ ಸಾಧ್ಯ ಇದೆ ಎಂದು ಸರ್ಕಾರ ಇಂಗಿತ ವ್ಯಕ್ತ ಮಾಡಿದೆ, ಆ ಬಗ್ಗೆ ನಾವು ಕುಳಿತುಕೊಂಡು ಚರ್ಚೆ ಮಾಡೋಣ. ಸದನದ ಸಮಯ ಹಾಳು ಮಾಡುವುದು ಬೇಡ, ಮೊದಲು ನೀರಾದ ಬಗ್ಗೆ ಚರ್ಚೆ ಮಾಡೋಣ. ಇದರಲ್ಲಿ ಪ್ರತಿಷ್ಠೆ ಪ್ರಶ್ನೆ ಮಾಡಬಾರದು. ಮಾನ್ಯ ಕಾಗೋಡು ತಿಮ್ಮಪ್ಪನವರು ಒಂದು ವಾರ ವಿದೇಶಕ್ಕೆ ಹೋಗಿದ್ದರು, ನಾವು ಸದನದಲ್ಲಿ ಭಾಗವಹಿಸಿ ಅವರ ಬಿಲ್‌ಗಳನ್ನು ಪಾಸ್ ಮಾಡಿಕೊಡಲಿಲ್ಲವೇ? ಇದನ್ನು ಏಕೆ ಪ್ರತಿಷ್ಠೆ ವಿಷಯವನ್ನಾಗಿ ಮಾತನಾಡುತ್ತಿದ್ದೀರಿ? ನೀವು ಸಿಟ್ಟು ಮಾಡಿಕೊಂಡರೂ ನಿಮ್ಮ ಬಿಲ್ ಪಾಸ್ ಮಾಡಿ ಕೊಟ್ಟಿದ್ದೇವೆ. ಮಾನ್ಯ ಮುಖ್ಯ ಮಂತ್ರಿಗಳು ನಾವು ವಾಕ್ ಔಟ್ ಮಾಡಿದಾಗ ಬಜೆಟ್ ಪಾಸ್ ಮಾಡಿಕೊಂಡರು. ಸಪ್ಲಿಮೆಂಟರಿ ಬಜೆಟ್‌ನಲ್ಲಿ ನಾವು ಕೇಳಿದ್ದಕ್ಕೆಲ್ಲಾ ಅವರು ಒಪ್ಪದೇ ಇರಬಹುದು, ಕನಿಷ್ಟಪಕ್ಷ ಓಲ್ಡ್ ಏಜ್ ಪೆನ್‌ಷನ್ ಜಾಸ್ತಿ ಮಾಡಿ ಎಂದು ಹೇಳಿದೆವು, ಅದೂ ಕೂಡ ಆಗುವುದಿಲ್ಲವೆಂದು ಹೇಳಿದರು. ಆದರೂ ನಾವು ಪಾಸ್ ಮಾಡಿಕೊಟ್ಟಿದ್ದೇವೆ. ನೀರಾದ ಬಗ್ಗೆ ಸರ್ಕಾರದ ನಿಲುವು ಏನು ಎಂದು ಜನಗಳಿಗೆ ಗೊತ್ತಾಗಬೇಕು. ಇಡೀ ರಾಜ್ಯದ ರೈತಾಪಿ ಜನ ಕಾತುರರಾಗಿದ್ದಾರೆ. ಮಾನ್ಯ ಅಧ್ಯಕ್ಷರೆ, ಯಾವುದೇ ಕಾರಣಕ್ಕೆ ತಮ್ಮ ಮನಸ್ಸು ಬದಲಾವಣೆ ಮಾಡಿ ಸರ್ಕಾರಕ್ಕೆ ನಿರ್ದೇಶನ ಕೊಡಿ. ನೀರಾದ ಬಗ್ಗೆ ಚರ್ಚೆ ಮಾಡಿದ ನಂತರ ವಿಶ್ವವಿದ್ಯಾನಿಲಯಗಳ

ತಿದ್ದುಪಡಿ ಮಸೂದೆ ತೆಗೆದುಕೊಳ್ಳೋಣ.

ಅಧ್ಯಕ್ಷರು: ನೀರಾ ವಿಷಯ ಚರ್ಚೆಗೆ ತೆಗೆದುಕೊಳ್ಳಬೇಕೆಂದು ಮಾನ್ಯ ವಿರೋಧ ಪಕ್ಷದ ಸದಸ್ಯರು ಒತ್ತಾಯ ಮಾಡುತ್ತಿದ್ದಾರೆ. ಎರಡನೆಯದಾಗಿ, ಯೂನಿವರ್ಸಿಟಿ ಬಿಲ್ ತೆಗೆದುಕೊಳ್ಳಬೇಕೆಂದು ಸರ್ಕಾರದವರು ಒತ್ತಾಯ ಮಾಡುತ್ತಿದ್ದಾರೆ. ಇಬ್ಬರ ಕಡೆಯಿಂದಲೂ ಒತ್ತಡ ಇರುವುದರಿಂದ ಮಾನ್ಯ ಸಿಂಧ್ಯಾರವರು ಸಲಹೆ ಕೊಟ್ಟ ಹಾಗೆ ಮಾಡೋಣ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಚರ್ಚೆ ನಡೆಯಲಿ, ಅದರ ಜೊತೆಗೆ ಬೇಕಾದರೆ ನಿಮ್ಮ ಛೇಂಬರ್‌ನಲ್ಲಿ ಕುಳಿತು ಮಾತನಾಡುವುದಕ್ಕೆ ನಾವು ತಯಾರಿದ್ದೇವೆ. ಈಗ ಯೂನಿವರ್ಸಿಟಿ ಬಿಲ್ ಕಮೆನ್ಸ್ ಮಾಡೋಣ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಮಾನ್ಯ ಅಧ್ಯಕ್ಷರೆ, ರೈತರ ಪರವಾಗಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ಇದು ಅವೈಜ್ಞಾನಿಕವೆಂದು ಸರ್ಕಾರದ ಧೋರಣೆಯಾದಲ್ಲಿ ಮೂರು-ನಾಲ್ಕು ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಮಾಡಿ ನೋಡೋಣ ಎಂದು ನಾವು ಕನ್‌ವಿನ್ಸ್ ಮಾಡುತ್ತಿದ್ದೇವೆ. ನಿಮಗೆ ಕನ್‌ವಿನ್ಸ್ ಮಾಡಿ ಆಗಿದೆ, ನಿಮಗೆ ಕನ್‌ವಿನ್ಸ್ ಮಾಡಿದ್ದರಿಂದ ನಿಯಮ ೬೯ರಲ್ಲಿ ಚರ್ಚೆಗೆ ಅವಕಾಶ ಮಾಡಿ ಕೊಟ್ಟಿದ್ದೀರಿ. ದಯವಿಟ್ಟು ಸದನದಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿ ಕೊಡಿ. ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲವೆಂದರೆ ಹೇಗೆ? ಈ ಬಿಲ್‌ನಲ್ಲಿ ಏನಿದೆ? ನಾವು ತಮ್ಮ ಮನಸ್ಸು ಬದಲಾವಣೆ ಮಾಡಿ ನೀರಾ ಬಗ್ಗೆ ಚರ್ಚೆ ಮಾಡುವುದಕ್ಕೆ ದಯವಿಟ್ಟು ಅವಕಾಶ ಮಾಡಿ ಕೊಡಿ. ಯಾರೋ ನಾಲ್ಕು ಜನರಿಗೆ ಅನುಕೂಲ ಮಾಡುವುದಕ್ಕೋಸ್ಕರ ವಿರೋಧ ಮಾಡಿದರೆ ಹೇಗೆ?

ಶ್ರೀ ಬಿ.ಸೋಮಶೇಖರ್: ನಾವು ಈಗಾಗಲೇ ಅನುಮತಿ ಕೊಟ್ಟಿರುವುದರಿಂದ ಈಗಾಗಲೇ ಚರ್ಚೆ ಪ್ರಾರಂಭವಾಗಿದೆ. ಅದನ್ನು ಮುಂದುವರೆಸಬೇಕು.

ಅಧ್ಯಕ್ಷರು: ಎರಡೂ ಕಡೆಯವರೂ ಹೊಂದಾಣಿಕೆ ಮಾಡಿಕೊಳ್ಳಬೇಕು. ಯೂನಿವರ್ಸಿಟಿ ಬಿಲ್ ತೆಗೆದುಕೊಂಡು ಚರ್ಚೆ ಪ್ರಾರಂಭ ಮಾಡಲಿ, ಎರಡು ಗಂಟೆ ಚರ್ಚೆಯಾದ ಮೇಲೆ ಆರು ಗಂಟೆಗೆ ನೀರಾ ವಿಷಯ ತೆಗೆದುಕೊಳ್ಳೋಣ.

ಶ್ರೀ ಎ.ರಾಮದಾಸ್: ಮಾತುಕತೆ ಯಶಸ್ವಿಯಾದ ಮೇಲೆ ನಾವು ಎರಡು ಗಂಟೆ ಚರ್ಚೆ ಮಾಡುವುದಿಲ್ಲ. ನೀರಾ ಬಗ್ಗೆ ಚರ್ಚೆ ಮಾಡುವುದಕ್ಕೆ ಸಮಯ ಕೇಳುತ್ತಿದ್ದೇವೆ, ಯೂನಿವರ್ಸಿಟಿ ಬಿಲ್ ಬಗ್ಗೆ ಚರ್ಚೆ ಮಾಡುವುದಿಲ್ಲ

ಅಧ್ಯಕ್ಷರು: ನಮ್ಮ ಅಜೆಂಡಾದಲ್ಲಿ ಯೂನಿವರ್ಸಿಟಿ ಬಿಲ್ ಇದೆ. That's all I

can say.

ಶ್ರೀ ಜಗದೀಶ್ ಶೆಟ್ಟರ್: ಹಿಂದೆ ಸಭಾತ್ಯಾಗ ಮಾಡಿದಾಗ ಪಾಸ್ ಮಾಡಿಕೊಂಡು ಹೋದರು. ಚರ್ಚೆ ಬೇಕಾಗಿಲ್ಲ, ನೀರಾದ ಬಗ್ಗೆ ಅವೈಜ್ಞಾನಿಕವೆಂದು ಹೇಳುತ್ತಾರೆ, ಆದರೆ ಚರ್ಚೆ ಎದುರಿಸಲಿಕ್ಕೆ ತಯಾರಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನಾವು ಚರ್ಚೆಗೆ ಸಿದ್ಧರಿದ್ದೇವೆ. ಇದನ್ನು ಮೊದಲು ಪಾಸ್ ಮಾಡಿಕೊಡಿ. ಆಮೇಲೆ ನೀವು ಎಷ್ಟು ಹೊತ್ತು ಚರ್ಚೆ ಮಾಡುತ್ತೀರೋ ಮಾಡಿ.....

ಅಧ್ಯಕ್ಷರು: ನೀವೆಲ್ಲರೂ ಮೊದಲು ಸಾಯಂಕಾಲ ೬ ಗಂಟೆಯವರೆಗೆ ಯೂನಿವರ್ಸಿಟಿ ಬಿಲ್ ಬಗ್ಗೆ ಮಾತನಾಡಿ.

ಶ್ರೀ ಜಗದೀಶ್ ಶೆಟ್ಟರ್: ನೀರಾ ಇಳಿಸುವ ವಿಚಾರ ಬಹಳ ಪ್ರಮುಖವಾದ ವಿಚಾರವಾಗಿದೆ. ಇದರ ಬಗ್ಗೆ ಬಹಳಷ್ಟು ಸದಸ್ಯರು ಅನೇಕ ವಿಚಾರಗಳನ್ನು ಸರ್ಕಾರಕ್ಕೆ ಹೇಳುವವರಿದ್ದಾರೆ. ಆದಕಾರಣ ಮೊದಲು ನೀರಾ ಬಗ್ಗೆ ಚರ್ಚೆಯನ್ನು ತೆಗೆದುಕೊಳ್ಳಬೇಕು.

ಅಧ್ಯಕ್ಷರು: ಸರ್ಕಾರದವರು ಒಪ್ಪಿದರೆ ನನ್ನದೇನೂ ಅಭ್ಯಂತರವಿಲ್ಲ. ನಾನು ಅಜೆಂಡಾ ಪ್ರಕಾರ ಹೋಗುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಮೊದಲು ನೀರಾ ಬಗ್ಗೆ ಚರ್ಚೆಯನ್ನು ತೆಗೆದುಕೊಳ್ಳದ ಸರ್ಕಾರದ ಧೋರಣೆಯನ್ನು ನಾವು ಖಂಡಿಸುತ್ತೇವೆ. ನೀರಾ ಬಗ್ಗೆ ಚರ್ಚೆಯನ್ನು ಮೊದಲು ತೆಗೆದುಕೊಳ್ಳಬೇಕೆಂದು ನಾವು ಧರಣಿಯನ್ನು ಮಾಡುತ್ತೇವೆ.

(ಸಂಯುಕ್ತ ಜನತಾದಳದ ಶಾಸಕರು ಸದನದ ಬಾವಿಯೊಳಗೆ ಬಂದು ಧರಣಿ ನಿರತರಾದರು)

ಡಾ:ಜಿ.ಪರಮೇಶ್ವರ್(ಉನ್ನತ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದವರು ಶಿಕ್ಷಣಕ್ಕೆ ಮಹತ್ವವನ್ನು ಕೊಡುತ್ತಿಲ್ಲ.

ಶ್ರೀ ಜಗದೀಶ್ ಶೆಟ್ಟರ್: ನಾವೇಕೆ ಶಿಕ್ಷಣಕ್ಕೆ ಮಹತ್ವ ಕೊಡುವುದಿಲ್ಲ? ನಾವು ಕಳೆದ ವಾರದಿಂದಲೂ ನೀರಾ ಇಳಿಸುವ ಅಗತ್ಯದ ಬಗ್ಗೆ ಚರ್ಚೆಗಾಗಿ ಕಾಯುತ್ತಿದ್ದೇವೆ. ಆದರೂ ಸರ್ಕಾರ ಇದನ್ನು ಪರಿಗಣಿಸದೇ ನೀರಾ ಇಳಿಸುವ ಬಗ್ಗೆ ಚರ್ಚೆಗೆ ಅವಕಾಶ ಕೊಡುತ್ತಿಲ್ಲವಾದ್ದರಿಂದ ಅದನ್ನು ಖಂಡಿಸಿ ನಾವು ಧರಣಿ ಮಾಡುತ್ತೇವೆ.

(ಬಿ.ಜೆ.ಪಿ. ಸದಸ್ಯರುಗಳೆಲ್ಲರೂ ಸದನದ ಬಾವಿಗೆ ಬಂದು ಧರಣಿ ನಿರತರಾದರು)

ಶ್ರೀ ಮಲ್ಲಿಕಾರ್ಜುನ ಖರ್ಗೆ(ಗೃಹ ಸಚಿವರು): ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಸಿಂಧ್ಯಾರವರು ಒಂದು ಸಲಹೆ ಕೊಡುತ್ತಾ ಸರ್ಕಾರದವರಿಗೂ ಕೂಡ ಯಾವುದೋ ಒಂದು ಸಲಹೆಯನ್ನು ಕೊಟ್ಟಿದ್ದೇವೆ, ಅದನ್ನು ಒಪ್ಪತಕ್ಕಂಥ ಸಾಧ್ಯತೆ ಇದೆ, ಆದುದರಿಂದ ಅದನ್ನು ಒಪ್ಪಿಕೊಂಡರೆ ಬಹುಶಃ ಬಿಲ್ ಪಾಸ್ ಮಾಡಿಸುವುದಕ್ಕೆ ತೊಂದರೆಯಾಗಲಾರದು ಎಂದು ಹೇಳಿದ್ದಾರೆ. ಆದುದರಿಂದ ಒಂದೈದು ನಿಮಿಷ ಆ ಸಲಹೆ ಯಾವುದು ಎಂಬ ಬಗ್ಗೆ ಪ್ರತಿಪಕ್ಷದವರು ಕೂಡ ಕುಳಿತು ಮಾತನಾಡಲಿ. ಅದು ಮುಗಿದ ಬಳಿಕ ಬಿಲ್ ಪಾಸ್ ಮಾಡಿಬಿಡಲಿ. ಬಿಲ್ ಪಾಸ್ ಆದ ನಂತರ ತಕ್ಷಣ ನೀರಾ ಬಗ್ಗೆ ಚರ್ಚೆ ಮಾಡಲಿ, ಚರ್ಚೆಗೆ ಸರ್ಕಾರ ಸಿದ್ಧವಿದೆ. ನೀವು ಈ ವಿಚಾರವನ್ನು ಸ್ಟಾಲ್ ಮಾಡುತ್ತಿದ್ದೀರಿ ಎನ್ನುವ ಅಭಿಪ್ರಾಯ ಬರುವುದೂ ಬೇಡ ಮತ್ತು ನಾವೂ ಕೂಡ ನೀರಾ ಬಗ್ಗೆ ಆಗುತ್ತಿರುವ ಚರ್ಚೆಗೆ ಅಡ್ಡ ಬರುತ್ತಿದ್ದೇವೆ ಎನ್ನುತಕ್ಕಂಥ ಅಭಿಪ್ರಾಯ ಬರುವುದು ಬೇಡ. ಅದಕ್ಕಾಗಿ ಒಂದು ಐದು ಅಥವಾ ಹತ್ತು ನಿಮಿಷ ಯಾವುದು ತಿದ್ದುಪಡಿ ಮಾಡಬೇಕು ಎಂಬುದನ್ನು ಮಾತನಾಡಿಕೊಂಡು ಬಿಲ್ ಪಾಸ್ ಮಾಡಿಬಿಡೋಣ. ನೀವೇ ಕೊಟ್ಟ ಸಲಹೆ ಪ್ರಕಾರ ನಾವು ನಡೆಯುತ್ತೇವೆ ಎಂದು ಹೇಳಿಕೊಂಡರೂ ಕೂಡ ನೀರಾ ಬಗ್ಗೆಯೇ ಮೊದಲು ಚರ್ಚೆ ಮಾಡಬೇಕು ಎಂದು ಹಟ ಹಿಡಿದರೆ ಅದು ಅಷ್ಟೊಂದು ಸಮಂಜಸವಲ್ಲವೆಂಬುದು ನನ್ನ ಅಭಿಪ್ರಾಯ.

(ಗೊಂದಲ)

ಅಧ್ಯಕ್ಷರು: I must go according to the agenda, that's all I can say. ಈಗ ೪.೦೦ ಗಂಟೆಯವರೆಗೆ ಸದನವನ್ನು ಮುಂದೂಡುತ್ತಿದ್ದೇನೆ. ಅಷ್ಟರೊಳಗೆ ನಾಯಕರುಗಳನ್ನು ಕರೆಸಿ ಒಂದು ತೀರ್ಮಾನವನ್ನು ಇದರ ಬಗ್ಗೆ ತೆಗೆದುಕೊಳ್ಳೋಣ.

(ಸದನವು ಮಧ್ಯಾಹ್ನ ೩-೩೦ಕ್ಕೆ ಮುಂದೂಡಿ ಮತ್ತೆ ೪-೦೦ ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

(ಸದನವು ಮಧ್ಯಾಹ್ನ ೪-೦೦ ಗಂಟೆಗೆ ಸಮಾವೇಶಗೊಂಡಿತು)

(ಮಾನ್ಯ ಉಪಾಧ್ಯಕ್ಷರು (ಶ್ರೀ ಮನೋಹರ್ ಹೆಚ್. ತಹಸೀಲ್ದಾರ್)ರವರು ಪೀಠವನ್ನಲಂಕರಿಸಿದರು)